CW.8 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.841/2009

| | |
|---|---|
| ಸಾಕ್ಷಿದಾರರ ಹೆಸರು | ಗಣೇಶ |
| ತಂದೆಯ ಹೆಸರು | ಲೇಟ್ ಯಲ್ಲಯ್ಯ |
| ವಯಸ್ಸು | 65 ವರ್ಷ |
| ವೃತ್ತಿ | ನಿವೃತ್ತ ಪಿ ಎಸ್ ಐ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 17.02.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ನಾನು 2007 ರಿಂದ 2012 ರವರೆಗೂ ನಾನು ಕೋಡಿಹಳ್ಳಿ ಪೋಲೀಸ್ ಠಾಣೆಯಲ್ಲಿ ಮುಖ್ಯಪೇದೆ ಆಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ಆರೋಪಿಯನ್ನು ನೋಡಿರುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು ಅವರನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಚಾಸಾ-1 ರಿಂದ 7 ಗೊತ್ತಿರುತ್ತಾರೆ.

ದಿಃ01.01.2009 ರಂದು ರಾತ್ರಿ 8 ಗಂಟೆ ಸಮಯದಲ್ಲಿ ನಾನು ಚಾಸಾ-1, ಚಾಸಾ-6 ಮತ್ತು 7 ರವರು ಹೊಸದುರ್ಗ ಗ್ರಾಮದಲ್ಲಿ ಗಸ್ತಿನಲ್ಲಿದ್ದಾಗ ಚಾಸಾ-1 ರವರಿಗೆ ಒಂದು ಮಾಹಿತಿ ಬಂದು ಹುಣಸನಹಳ್ಳಿ ಕಡೆಯಿಂದ ಒಂದು ಲಾರಿ ಬರುತ್ತಿದ್ದು ಅದನ್ನು ನಿಲ್ಲಿಸಲು ಸೂಚಿಸಿದರು. ನಾವು ನಿಲ್ಲಿಸಲು ಪ್ರಯತ್ನ ಮಾಡಿದಾಗ ಆತ ಸ್ವಲ್ಪ ಮುಂದಕ್ಕೆ ಹೋಗಿ ನಂತರ ನಿಲ್ಲಿಸಿರುತ್ತಾನೆ. ಸದರಿ ಲಾರಿಯನ್ನು ನಿಲ್ಲಿಸಿ

ಪರಿಶೀಲನೆ ಮಾಡಿ ನೋಡಿದಾಗ 8 ಕೊರೆ ಮೂಟೆ ಅಕ್ಕಿ ಇರುವುದು ಕಂಡು ಬಂದಿರುತ್ತದೆ. ನಂತರ ಚಾಸಾ-2 ರಿಂದ 4 ರವರ ಸಮಕ್ಷಮ ಸದರಿ ಅಕ್ಕಿ ಮೂಟೆಯನ್ನು ಅಮಾನತು ಪಡಿಸಿಕೊಂಡು ಮಹಜರ್ ಮಾಡಲಾಗಿರುತ್ತದೆ.

ಸದರಿ ಲಾರಿ ಚಾಲಕನ ಹೆಸರು ಸಮೀ ಬಿನ್ ಖಾಸಿಂ ಖಾನ್ ಎಂದು ಹೇಳಿದ್ದು ಇತ ಸದರಿ ಅಕ್ಕಿ ಮೂಟೆಗಳ ಬಗ್ಗೆ ಯಾವುದೇ ವಿವರಣೆ ನೀಡಿರುವುದಿಲ್ಲ. ಸದರಿ ಲಾರಿಯ ಸಂಖ್ಯೆ ಕೆಎ-11ಬಿ-2349 ಆಗಿರುತ್ತದೆ. ಸದರಿ ಲಾರಿಯ ಮುಂಭಾಗದಲ್ಲಿ ಮಲ್ಲಿಕಾರ್ಜುನ ಸ್ವಾಮಿ ಎಂದು ಬರೆಯಲಾಗಿತ್ತು. ನಂತರ ಅಮಾನತು ಪಡಿಸಿಕೊಂಡ ವಸ್ತುಗಳ ಜೊತೆ ಆರೋಪಿಯನ್ನು ದಸ್ತಗಿರಿ ಮಾಡಿಕೊಂಡು ಠಾಣೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ಸದರಿ ಮಹಜರ್ ನ್ನು ರಾತ್ರಿ 8 ರಿಂದ 8.45 ಗಂಟೆಯವರೆಗೂ ಮಾಡಲಾಗಿರುತ್ತದೆ.

ಸಾಕ್ಷಿಗೆ ಸದರಿ ಪ್ರಕರಣದ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಈ ಸಂಬಂಧ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಮಗೆ ಮಾಹಿತಿ ಬಂದಾಗ 8 ಗಂಟೆಯಾಗಿತ್ತು. ಸದರಿ ದಿನ ನಾವು ಸದರಿ ಸಮಯದಲ್ಲಿ ಹೊಸದುರ್ಗ ಬಸ್ ನಿಲ್ದಾಣ ರಾಮದೇವರ ದೇವಸ್ಥಾನದ ಬಳಿ ಗಸ್ತು ಮಾಡುತ್ತಿದ್ದೇವು. ಗಸ್ತಿಗೆ ನೇಮಿಸಿದ್ದವರ ಬಗ್ಗೆ ಠಾಣೆಯಲ್ಲಿ ರೋಲ್ ಕಾಲ್ ರಿಜಿಸ್ಟರ್ ಇರುತ್ತದೆಂದರೆ ಸರಿ. ನಾನು ಹೇಳಿಕೆಯನ್ನು ಕೊಡುವ ಸಂದರ್ಭದಲ್ಲಿ ಸದರಿ ರೋಲ್ ಕಾಲ್ ನ ರಿಜಿಸ್ಟರ್ ಪ್ರತಿಯನ್ನು ಕೊಟ್ಟಿರುವುದಿಲ್ಲ ಅದು ತನಿಖಾಧಿಕಾರಿಗೆ ಸಂಬಂಧಿಸಿರುತ್ತದೆಂದು ನುಡಿಯುತ್ತಾರೆ. ನಾವು ಸದರಿ ದಿನ ಸದರಿ ಸ್ಥಳಕ್ಕೆ

ಹೋಗಿರುವುದಿಲ್ಲ ಹಾಗೂ ನಾನು ಹೇಳಿದ ರೀತಿಯಲ್ಲಿ ಸದರಿ ಲಾರಿಯಿಂದ 8 ಕೋರೆ ಅಕ್ಕಿ ಚೀಲಗಳನ್ನು ಮಹಜರ್ ಮಾಡುವ ಮೂಲಕ ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಯಾವುದೇ ಹೇಳಿಕೆ ಕೊಡದೇ ಇದ್ದರೂ ಸಹಿತ ಠಾಣೆಯಲ್ಲೇ ಹೇಳಿಕೆಯನ್ನು ಬನಾವಟ್ ಮಾಡಲಾಗಿರುತ್ತದೆಂದರೆ ಸರಿಯಲ್ಲ. ಕೇವಲ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಮಹಜರ್ ನ್ನು ಕೂಡ ಠಾಣೆಯಲ್ಲಿ ಬನಾವಟ್ ಮಾಡಲಾಗಿರುತ್ತದೆಂದರೆ ಸರಿಯಲ್ಲ. ಕೇವಲ ಮೇಲಾಧಿಕಾರಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**